O.S. NO. 100/2022

PW -1 .

Dated 23-09-2024.

ಸಾಕ್ಷಿಯನ್ನು ಈ ದಿನ ದಿನಾಂಕ 23-09-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 5 ಮತ್ತು 6 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎಮ್ ಎಸ್ ವಕೀಲರಿಂದಃ

ಮೂಲ ಪುರುಷ ಯಲ್ಲಪ್ಪ ಇವರಿಗೆ 5 ಜನ ಗಂಡು ಮಕ್ಕಳು ಎಂದರೆ ನಿಜ. ಅವರಲ್ಲಿ ಶಿವಪ್ಪ ಮತ್ತು ಬಸಪ್ಪ ಮೃತ ಪಟ್ಟಿರುತ್ತಾರೆ ಎಂದರೆ ನಿಜ. ಅವರಲ್ಲಿ ವಾದಿ ರುದ್ರಪ್ಪ ನನ್ನ ತಂದೆ ಎಂದರೆ ನಿಜ. ಪ್ರತಿವಾದಿ 4 ಮತ್ತು 5 ಗಂಗಪ್ಪ ಮತ್ತು ಅಪ್ಪಣ್ಣ ನನ್ನ ತಂದೆ ಸಹೋದರರು ಎಂದರೆ ನಿಜ. ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಸಲು ಮಾಹಿತಿ ನಾನೇ ಕೊಟ್ಟಿರುತ್ತೇನೆ. ಸದರಿ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ಸಂಪೂರ್ಣ ವಸ್ತು ವಿಷಯ ನನಗೆ ಗೊತ್ತಿರುತ್ತದೆ ಎಂದರೆ ನಿಜ. ಪ್ರಸ್ತುತ ದಾವೆಯಲ್ಲಿ 50 ಎಕರೆ ಕುರಿತು ದಾವೆ ಸಲ್ಲಿಸಿರುತ್ತೇವೆ. ಅವುಗಳ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ನಮ್ಮ ಕುಟುಂಬಕ್ಕೆ 50 ಎಕರೆ ಆಸ್ತಿ ಇರುತ್ತದೆ ಎಂದು ತೋರಿಸಲು ಪ್ರಸ್ತುತ ದಾವೆಯಲ್ಲಿ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಸದರಿ 50 ಎಕರೆ ಜಮಿನು ಸಂಪಗಾಂವ, ಸಾಣಿಕೊಪ್ಪ ಮತ್ತು ಪಟ್ಟಿಹಾಳ ಗ್ರಾಮಗಳಲ್ಲಿ ಇರುತ್ತವೆ. ಇವುಗಳಲ್ಲಿ ಪಿತ್ರಾರ್ಜಿತ ಆಸ್ತಿಗಳು ಯಾವು ಯಾವು ಎಂದು ನನಗೆ ಹೇಳಲು ಬರುವುದಿಲ್ಲ. ಭೂ ನ್ಯಾಯ ಮಂಡಳಿಯಿಂದ ಬಂದಂತ ಆಸ್ತಿಗಳು ಯಾವ ಗ್ರಾಮ ಸರ್ವೆ ನಂಬರಗಳಲ್ಲಿ ಇವೆ ಎಂದು ನನಗೆ ಗೊತ್ತಿಲ್ಲ. ಯಲ್ಲಪ್ಪನ ವಾರಸಾದಾರರಲ್ಲಿ ಭೂ ನ್ಯಾಯ ಮಂಡಳಿಗೆ ಯಾರು ಅರ್ಜಿ ಕೊಟ್ಟಿದ್ದರು ಎಂದರೆ ನನ್ನ ಅಪ್ಪನ ತಮ್ಮ ಗಂಗಪ್ಪ ಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಭೂ ನ್ಯಾಯ ಮಂಡಳಿಯಿಂದ

ಮಂಜೂರಾದ ಆಸ್ತಿಯ ಸರ್ವೆ ನಂಬರ ನನಗೆ ನೆನಪಿಲ್ಲ. 5 ನೇ ಪ್ರತಿವಾದಿ ಗಂಗಪ್ಪ ಭೂ ನ್ಯಾಯ ಮಂಡಳಿಗೆ ಅರ್ಜಿ ಕೊಟ್ಟಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾಖಲೆಗಳು ಎಂದರೆ ಆರ್ ಟಿ ಸಿ ಉತಾರಗಳು ಕೊಟ್ಟಿರುತ್ತೇನೆ. ಸದರಿ ಆರ್ ಟಿ ಸಿ ಉತಾರಗಳ ಸರ್ವೆ ನಂಬರ ನನಗೆ ಗೊತ್ತಿಲ್ಲ. ನಾನು ಹೇಳುವಂತೆ 5 ನೇ ಪ್ರತಿವಾದಿ ಆಗಲಿ ಅಥವಾ ಯಲ್ಲಪ್ಪನ ವಾರಸಾದಾರರಲ್ಲಿ ಯಾರೂ ಆಗಲಿ ಭೂ ನ್ಯಾಯ ಮಂಡಳಿಗೆ ಯಾವುದೇ ಅರ್ಜಿ ವಗೈರೆಪಾಟಿ ಸವಾಲುಃ 5 ಮತ್ತು 6 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎಮ್ ಎಸ್ ವಕೀಲರಿಂದಃ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಭೂ ನ್ಯಾಯ ಮಂಡಳಿಯಿಂದ ಏಕತ್ರ ಕುಟುಂಬಕ್ಕೆ ಆಸ್ತಿಗಳು ಬಂದಿರುತ್ತವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗಾಗಲೇ ಯಲ್ಲಪ್ಪನ ವಾರಸಾ ಮಧ್ಯೆ ವಾಟ್ನಿ ಆಗಿರುತ್ತದೆ ಎಂದರೆ ವಾಟ್ನಿ ಆಗಿದೆ ಆದರೆ ಅದು ಸರಿಯಾಗಿ ಆಗಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. 2015 ರಲ್ಲಿ ವಾಟ್ನಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಖೊಟ್ಟಿ ವಾಟ್ನಿ ಆಗಿದೆ ಎಂದು ನುಡಿದಿರುತ್ತಾರೆ. ಸದರಿ ವಾಟ್ನಿಯು ನನ್ನ ತಂದೆ ಮತ್ತು ಆತನ ಸಹೋದರರಾದ ಪ್ರತಿವಾದಿ 5, 6 ಮತ್ತು ಶಿವಪ್ಪ ಮತ್ತು ಬಸಪ್ಪನ ಮಕ್ಕಳ ನಡುವೆ ಆಗಿರುತ್ತದೆ ಎಂದರೆ ಸರಿ. ಸದರಿ ವಾಟ್ನಿ ಪತ್ರ ಬೈಲಹೊಂಗಲ ಸಬ ರಜಿಸ್ಟರ ಕಚೇರಿಯಲ್ಲಿ ನೊಂದಣಿ ಆಗಿರುತ್ತದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ವಾಟ್ನಿ ಖೊಟ್ಟಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ

ನೊಂದಾಯಿತ ವಾಟ್ನಿ ಪತ್ರಕ್ಕೆ ನನ್ನ ತಂದೆ, ಪ್ರತಿವಾದಿ 5, 6 , ಶಿವಪ್ಪ ಮತ್ತು ಬಸಪ್ಪನ ಮಕ್ಕಳು ಸಹಿ ಮಾಡಿರುತ್ತಾರೆ ಎಂದರೆ ನಿಜ. ಸದರಿ ನೊಂದಯಿತ ವಾಟ್ನಿ ಪ್ರಕಾರ ಅವರ ಅವರ ಹಿಸ್ಸೆಯ ಆಸ್ತಿಗಳನ್ನು ಅವರವರು ಪ್ರತ್ಯೇಕ ಕಬ್ಜಾ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಾಟ್ನಿ ಪ್ರಕಾರ ಅವರವರ ಹಿಸ್ಸೆಯ ಪ್ರತ್ಯೇಕ ಆರ್ ಟಿ ಸಿ ಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು 5 , 6 ನೇ ಪ್ರತಿವಾದಿಗಳಿಗೆ ತಲಾ 5 ಎಕರೆ ವಾಟ್ನಿಯಲ್ಲಿ ಬಂದಿಪಾಟಿ ಸವಾಲುಃ 5 ಮತ್ತು 6 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎಮ್ ಎಸ್ ವಕೀಲರಿಂದಃರುತ್ತವೆ ಎಂದರೆ ಸರಿಯಲ್ಲ. ವಾಟ್ನಿಯಲ್ಲಿ ನನ್ನ ತಂದೆಗೆ ಮತ್ತು 5 , 6 ನೇ ಪ್ರತಿವಾದಿಗಳಿಗೆ ಸರಿ ಸಮಾನವಾಗಿ ಆಸ್ತಿಗಳು ಬಂದಿರುತ್ತವೆ ಎಂದರೆ ಸುಳ್ಳು.

ವಾಟ್ನಿ ಪತ್ರದಲ್ಲಿ ನನ್ನ ತಂದೆಯ ಹಿಸ್ಸೆ 3 ಎಕರೆ 26 ಗುಂಟೆ ಅಂತಾ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರ ನೊಂದ ಆದ ದಿನವೇ ನನ್ನ ತಂದೆ ಹೆಸರಿಗೆ 1 ಎಕರೆ 12 ಗುಂಟೆ ಜಮಿನು ಕುರಿತು ಹಕ್ಕು ಬಿಟ್ಟು ಪತ್ರ ಬರೆದು ಕೊಟ್ಟಿರುತ್ತಾರೆ ಎಂದರೆ ಸುಳ್ಳು. 5 ಮತ್ತು 6 ನೇ ಪ್ರತಿವಾದಿಯರು ಮತ್ತು ಬಸಪ್ಪ ಸಾಮೂಹಿಕವಾಗಿ 8 ಗುಂಟೆ ಜಮಿನು ನನ್ನ ತಂದೆಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಹೀಗಾಗಿ ನನ್ನ ತಂದೆಯ ಕಬ್ಜೆಯಲ್ಲಿ ಒಟ್ಟು 5 ಎಕರೆ 6 ಗುಂಟೆ ಜಮಿನು ಇರುತ್ತದೆ ಎಂದರೆ ಸುಳ್ಳು. ನಮ್ಮ ಕುಟುಂಬಕ್ಕೆ 3 ಮನೆಗಳು ಇವೆ. ಸದರಿ 3 ಮನೆಗಳ ಪೈಕಿ ಒಂದು ಪೂರ್ತಿ ಮನೆಯಲ್ಲಿ ನಾವು ವಾಸ ಇದ್ದೇವೆ ಎಂದರೆ ಸರಿ. ನಾವು ವಾಸ ಇದ್ದ ಮನೆಯ ಪಂಚಾಯತಿ ನಂಬರ ನನಗೆ ಗೊತ್ತಿಲ್ಲ. 2015 ರಲ್ಲಿ ಆದ

O.S. NO. 100/2022

PW -1 .

Dated 23-09-2024.

ವಾಟ್ನಿ ಪ್ರಕಾರ ಸದರಿ ವಾಟ್ನಿ ಪತ್ರದ ಎಲ್ಲ ಹಿಸ್ಸಾದಾವರರು ತಮ್ಮ ತಮ್ಮ ಹಿಸ್ಸಾಗಳನ್ನು ಪಡೆದುಕೊಂಡು ತಮ್ಮ ತಮ್ಮ ಕಬ್ಜಾ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸುಳ್ಳು. ಯಲ್ಲಪ್ಪನ ಕೊನೆಯ ಮಗ ಬಸಪ್ಪ ಈಗ ಮೃತ ಪಟ್ಟಿರುತ್ತಾನೆ. ಸದರಿ ಬಸಪ್ಪನ ಮಕ್ಕಳು ಪ್ರತ್ಯೇಕವಾಗಿ ದುಡಿದು ಹಣ ಉಳಿತಾಯ ಮಾಡಿ ಪ್ರತ್ಯೇಕ ತಮ್ಮ ಸ್ವಯಾರ್ಜಿತ ಆಸ್ತಿಗಳನ್ನು ಮಾಡಿರುತ್ತಾರೆ ಎಂದರೆ ಸುಳ್ಳು. ವಾಟ್ನಿಯಲ್ಲಿ ನನ್ನ ತಂದೆಯ ಹಿಸ್ಸೆಗೆ ಬಂದ ಜಮಿನುಗಳು ಫಲವತ್ತಾದ ಜಮಿನುಗಳು ಇರುತ್ತವೆ ಎಂದರೆ ಸುಳ್ಳು. ದಾವೆಯಲ್ಲಿ ನನ್ನ ತಂದೆಗೆ ಬರೆದುಕೊಟ್ಟ ಹಕ್ಕು ಬಿಟ್ಟ ಪತ್ರ ರದ್ದತಿ ಕುರಿತು ಪರಿಹಾರ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮನೆಯ ಮತ್ತು ಹೊಲದ ಉತಾರಗಳನ್ನು ಪ್ರತ್ಯೇಕವಾಗಿ ನಾನೇ ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 02-11-2015ರಂದು ಆದ ವಾಟ್ನಿ ಪ್ರಕಾರ ಎಲ್ಲ ಹಿಸ್ಸಾದಾರರು ತಮ್ಮ ತಮ್ಮ ಹಿಸ್ಸಾದ ಆಸ್ತಿಗಳನ್ನು ಪ್ರತ್ಯೇಕಬ ಕಬ್ಜಾ ವಹಿವಾಟು ಮಾಡುತ್ತಿದ್ದರೂ ಸಹ ವಾಟ್ನಿ ಆಗಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 7 ರಿಂದ 12 ನೇ ಪ್ರತಿವಾದಿ ಪರವಾಗಿ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು .

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಬೈಲಹೊಂಗಲ.